**ಇಂದು ದಿನಾಂಕ:30.08.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.BMK ವಕೀಲರಿಂದಃ**

ವಾದಿ ನನ್ನ ತಂಗಿ. ನನ್ನ ತಂದೆಗೆ ನಾನೇ ಹಿರಿಯ ಮಗ. ವಾದಿಗೆ ಮದುವೆಯಾಗಿ ಅಂದಾಯಿ ಎಷ್ಟು ವರ್ಷವಾಗಿದೆ ಎಂದು ಹೇಳಲು ಗೊತ್ತಿಲ್ಲ. ನನ್ನ ತಂದೆ ತಾಯಿ ಮತ್ತು ನಾವೆಲ್ಲರೂ ಸೇರಿ ವಾದಿಯ ಮದುವೆ ಮಾಡಿದ್ದೇವೆ. ವ್ಯವಸಾಯದ ಉದ್ದೇಶಕ್ಕಾಗಿ ಬ್ಯಾಂಕ್ ನಿಂದ ಪ್ರತಿ ವರ್ಷ ಸಾಲ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಬ್ಯಾಂಕ್ ನಿಂದ ನನ್ನ ತಂದೆ ಸಾಲ ಪಡೆದುಕೊಳ್ಳುತ್ತಿದ್ದಾಗ ದಾಖಲೆಗಳಿಗೆ ವಾದಿಯ ಸಹಿ ಪಡೆದುಕೊಳ್ಳುತ್ತಿರಲಿಲ್ಲ. ಸಾಲದ ಉದ್ದೇಶಕ್ಕಾಗಿ ನನ್ನ ಮತ್ತು ನನ್ನ ಸಹೋದರರ ಸಹಿ ಪಡೆದುಕೊಳ್ಳುತ್ತಿದ್ದರು. ಜಮೀನು ಬೇಕು ಎಂದು ವಾದಿ ಈ ಕೇಸು ಹಾಕಿದ್ದಾರೆ. ದಾವಾ ಆಸ್ತಿಗಳೆಲ್ಲವೂ ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳೆಂದರೆ ಸರಿ. ದಾವಾ ಆಸ್ತಿಗಳನ್ನು ನನ್ನ ತಂದೆ ಇದ್ದಾಗಲೇ 5 ಭಾಗಗಳಾಗಿ ವಿಭಾಗ ಮಾಡಲಾಗಿತ್ತು. ನನ್ನ ತಂದೆ ತೀರಿಕೊಂಡು 2.5–3 ವರ್ಷಗಳಾಗಿವೆ. ಯಾವ ದಿನಾಂಕದಂದು ಆಸ್ತಿಗಳನ್ನು ವಿಭಾಗ ಮಾಡಲಾಗಿತ್ತು ಎಂದು ಗೊತ್ತಿಲ್ಲ. ನನ್ನ ತಂದೆ ವಿಭಾಗ ಪತ್ರವನ್ನು ನೊಂದಣಿ ಮಾಡಿಸಿದ್ದಾರೆ. ನೊಂದಣಿ ವಿಭಾಗ ಪತ್ರದ ಮೂಲಕ ನನಗೆ ಮತ್ತು ಪ್ರತಿವಾದಿ 4 ರಿಂದ 6 ರವರಿಗೆ ಯಾವ ಯಾವ ಆಸ್ತಿಗಳು ಹೋಗಿವೆ ಎಂದು ಗೊತ್ತಿಲ್ಲ. ನನಗೆ 3 ಎಕರೆ 36 ಗುಂಟೆ ಬಂದಿದೆ ಅದರ ಸರ್ವೆ ನಂಬರ್ ಗೊತ್ತಿಲ್ಲ. ನೊಂದಣಿ ವಿಭಾಗ ಪತ್ರದ ಮೂಲಕ ಈ ದಾವೆಯಲ್ಲಿರುವ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ. ನನ್ನ ತಂದೆ ಬದುಕಿದ್ದವರೆಗೂ ಒಟ್ಟು ಕುಟುಂಬದ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ಯಾವ ಯಾವ ಆಸ್ತಿಗಳನ್ನು ಖರೀದಿಸಿದ್ದಾರೆಯೋ ಆ ಎಲ್ಲಾ ಆಸ್ತಿಗಳನ್ನು ಖರೀದಿಸಲು ಒಟ್ಟು ಕುಟುಂಬದ

ಆಸ್ತಿಗಳಿಂದ ಬಂದ ಆದಾಯ ಬಳಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುವುದೇಂದರೆ ನಾನು ಕೂಡ ಸ.ನಂ.282 ರಲ್ಲಿ 1 ಎಕರೆ ಜಮೀನನ್ನು ವಿಭಾಗವಾದ ನಂತರ ಖರೀದಿಸಿದ್ದೇನೆ. ನಾನು ಖರೀದಿಸಿರುವ ಜಮೀನಿನ ಖಾತೆ ನನ್ನ ಹೆಸರಿಗೆ ಬಂದಿದೆ. ಮಲ್ಲೇಗೌಡ ಎಂಬುವರಿಂದ ನಾನು ಖರೀದಿಸಿದ್ದೇನೆ. ಖರೀದಿಸಿರುವ ದಿನಾಂಕ ಗೊತ್ತಿಲ್ಲ. ನಾನು ಮತ್ತು 4 ನೇ ಪ್ರತಿವಾದಿ ಸೇರಿ ದಾವಾ ಐಟಂ ನಂಬರ್ 11 ರ ಜಮೀನನ್ನು ಗೋವಿಂದೇಗೌಡ ಎಂಬುವರಿಗೆ ಸುಮಾರು 20 ವರ್ಷಗಳ ಹಿಂದೆ ನಾವು ಭಾಗ ಆದ 2 ವರ್ಷದ ನಂತರ ಮಾರಾಟ ಮಾಡಿದ್ದೇವೆ. ಆ ಜಮೀನಿನಲ್ಲಿ 1 ಎಕರೆ 2 ಗುಂಟೆ ನನ್ನ ಹೆಸರಿನಲ್ಲಿ ಮತ್ತು ನನ್ನ ತಂದೆಯ ಹೆಸರಿನಲ್ಲಿ 1 ಎಕರೆ 2 ಗುಂಟೆ ಇತ್ತು. ಆ ಕ್ರಯ ಪತ್ರಕ್ಕೆ ನನ್ನ ತಂದೆಯೂ ಸಹ ಸಹಿ ಮಾಡಿದ್ದಾರೆ. ಆ ಕ್ರಯ ಪತ್ರಕ್ಕೆ ವಾದಿ ಮತ್ತು ಇತರೇ ಪ್ರತಿವಾದಿಗಳು ಸಹಿ ಮಾಡಿಲ್ಲ. ದಾವಾ ಐಟಂ ನಂಬರ್ 10 ರ ಆಸ್ತಿಯನ್ನು ನಾನು ಖರೀದಿಸಿದ್ದೇನೆ ಅದನ್ನು ಖರೀದಿಸಿರುವ ದಿನಾಂಕ ಗೊತ್ತಿಲ್ಲ. ಸದರಿ ಆಸ್ತಿಯ ಖಾತೆ ನನ್ನ ಹೆಸರಿನಲ್ಲಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ತಿಳಿದಿದ್ದೇನೆ. ಅದರಲ್ಲಿರುವ ವಿಷಯಗಳನ್ನು ಬರೆಯಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಪಿರಿಯಾಪಟ್ಟಣ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ.350/2021 ರಂತೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಸ.ನಂ.221 ರ ಜಮೀನನ್ನು ನನಗೆ ಬಿಡಿಸಿಕೊಡಿ ಎಂದು ಆ ದಾವೆ ಹಾಕಿದ್ದೇನೆ. ಅಸಲು ದಾವಾ ನಂಬರ್ 329/2021 ರ ದಾವೆಯನ್ನು ಸಹ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸ.ನಂ.221 ಕ್ಕೆ ಸಂಬಂಧಿಸಿದಂತೆ ಹಾಕಿದ್ದೇನೆ. ಲಿಖಿತ ಹೇಳಿಕೆ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ದಾವಾ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ದಿನಾಂಕ 07.01.2022 ರಂದು ಈ ನ್ಯಾಯಾಲಯದಿಂದ ತಾತ್ಕಾಲಿಕ ಆದೇಶವಾಗಿತ್ತು ಎಂದರೆ ಸರಿ. ನ್ಯಾಯಾಲಯದ ಆದೇಶವಿದ್ದರೂ ಸಹ ದಾವಾ ಐಟಂ ನಂಬರ್ 3

ಮತ್ತು 4 ರ ಆಸ್ತಿಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಕ್ಕಳಾದ ಸಂತೋಷಕುಮಾರ, ಮೋಹನಕುಮಾರ, ಹರೀಶಕುಮಾರ ಮತ್ತು ಗಿರೀಶಕುಮಾರ ಸೇರಿ ದಿನಾಂಕ 11.04.2023 ರಂದು ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿ ಬೆಟ್ಟದಪುರ ಗ್ರಾಮದ ಮಹೇಶರವರ ಮಗ ಶಿವ ಎಂಬುವರಿಗೆ ಕ್ರಯ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-1 ರ ಪ್ರಕಾರ ದಾವಾ ಐಟಂ ನಂಬರ್ 1, 2, 16 ರಿಂದ 19 ರ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿಲ್ಲ ಎಂದರೆ ಅದರಲ್ಲಿ ಎಷ್ಟು ಆಸ್ತಿಗಳು ಇವೆಯೋ ಅಷ್ಟನ್ನು ಮಾತ್ರ ವಿಭಾಗ ಮಾಡಿಕೊಂಡಿದ್ದೇವೆ ಉಳಿದ ಆಸ್ತಿಗಳನ್ನು ಭಾಗ ಆದ ನಂತರ ನಾನು ಮತ್ತು ನನ್ನ ಸಹೋದರರೆಲ್ಲರೂ ಖರೀದಿಸಿದ್ದೇವೆ. ಈ ವಿಷಯವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿಲ್ಲ. ಆ ರೀತಿ ಬರೆಸಿ ಹಾಕಲು ತೊಂದರೆ ಇರಲಿಲ್ಲ. ವಿಭಾಗ ಆದ ನಂತರ ಸ.ನಂ.288 ರಲ್ಲಿ 1 ಎಕರೆ ನಾನು ಖರೀದಿಸಿದ್ದೇನೆ. ನನ್ನ ಸಹೋದರರಾದ ಶಿವ ಮತ್ತು ಲೋಕೇಶ ಜಂಟಿಯಾಗಿ 1½ ಎಕರೆ ಖರೀದಿಸಿದ್ದಾರೆ. ವಿಭಾಗವಾದ ನಂತರ ನಾನು ಬೇರೆ ಯಾವುದೇ ಆಸ್ತಿಗಳನ್ನು ಖರೀದಿಸಿಲ್ಲ.

**ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**